ಆಗಿನ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಮೈಸೂರಿಗೆ ಬಂದಾಗಲೆಲ್ಲ ಅವರಿಗೆ ಕುಮಾರವ್ಯಾಸನ ಗಮಕ ವಾಚನವನ್ನು ಕೇಳಿಸುತ್ತಿದ್ದವರು ಶಾಲಾ ಉಪಾಧ್ಯಾಯರಾಗಿದ್ದ ತಲಕಾಡು ಮಾಯಣ್ಣ ಗೌಡರು. ಅದಾಗಲೇ ಕೆಂಗಲ್ ಹನುಮಂತಯ್ಯನವರಿಗೆ ಕುಮಾರವ್ಯಾಸನ ಜನಪ್ರಿಯ ಪ್ರತಿಯೊಂದನ್ನು ಸುಲಭ ದರದಲ್ಲಿ ಪ್ರಕಟಿಸುವ ಹಂಬಲ ಉಂಟಾಯಿತಂತೆ!

ಕುಮಾರವ್ಯಾಸ ಮತ್ತು ಗಮಕ ಕಲೆಯನ್ನು ಕುರಿತಾದ ಕಥನ ಮಾದರಿಯ ಸಂಗತಿಗಳೂ ಕರ್ನಾಟಕದಾದ್ಯಂತ ಹಬ್ಬಿಕೊಂಡಿರುತ್ತವೆ. ಅಂಥ ಕೆಲವನ್ನಾದರೂ ಇಲ್ಲಿ ಪ್ರಸ್ತಾಪಿಸುವುದಾದರೆ ಕಳೆದ ಶತಮಾನದಲ್ಲಿಯೇ ಕುಮಾರವ್ಯಾಸನ ಓದು, ವ್ಯಾಖ್ಯಾನ ಮತ್ತು ಕವಿಯಾಗಿ ಅವನ ಜನಪ್ರಿಯತೆಯ ಅರಿವಾಗುತ್ತದೆ.



1851ರಲ್ಲಿ ಕುಮಾರವ್ಯಾಸ ಭಾರತದ ಮೊದಲ ನಾಲ್ಕು ಪರ್ವಗಳನ್ನು ಕಲ್ಲಚ್ಚು ಪ್ರತಿಯಲ್ಲಿ ಪ್ರಕಟಿಸಿದ ಹರ್ಮನ್ ಮೊಗ್ಲಿಂಗ್

'ನಾಡೋಜ ಪಂಪ' ಕೃತಿ ಬರೆದು ಪ್ರಸಿದ್ಧರಾದ ಮುಳಿಯ ತಿಮ್ಮಪ್ಪಯ್ಯನವರು ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲದ ಕಡೆಯ ಮುಳಿಯ ಗ್ರಾಮದವರು. ನಾಲ್ಕನೆಯ ತರಗತಿಯವರೆಗೆ ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಓದಿ ಮೈಸೂರು ವಾಸುದೇವಾಚಾರ್ಯರಲ್ಲಿ ಶಿಷ್ಯತ್ವ ಮಾಡಿ ಸಂಗೀತ ಮತ್ತು ಗಮಕ ಕಲಿತರು. 1911ರಲ್ಲಿ ಒಮ್ಮೆ ಇವರ ಕಾವ್ಯವಾಚನ ಕೇಳಿದ ಅಮ್ಮೆಂಬಳ ಶ್ರೀನಿವಾಸ ಪೈಗಳು ಇವರನ್ನು ಮಂಗಳೂರು ಕೆನರಾ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ನೇಮಕಗೊಳ್ಳಲು ಕಾರಣರಾದರಂತೆ. ಅಂದರೆ ಗಮಕವಾಚನವೇ ಮುಳಿಯ ತಿಮ್ಮಪ್ಪಯ್ಯನವರಿಗೆ ಉದ್ಯೋಗ ಕೊಡಿಸಿತು!

ಮೈಸೂರಿನಲ್ಲಿದ್ದ ಕುವೆಂಪು ಅವರು ಆಗಾಗ ಶಿವಮೊಗ್ಗದ ತೀರ್ಥಹಳ್ಳಿ, ಕುಪ್ಪಳಿ ಕಡೆ ಹೋದಾಗ ಮೈಸೂರಿನ ಪ್ರಸಿದ್ಧ ಗಮಕಿಗಳಾದ ಕೃಷ್ಣರಾಯರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರಂತೆ. ಇದು 1934ರ ಸಂಗತಿ. "...ಮಲೆನಾಡು ಯುವಕ ಸಂಘದ ವಾರ್ಷಿಕೋತ್ಸವವು ಇಂಗ್ಲಾದಿಯಲ್ಲಿ (ದೇವಂಗಿ) ಬಹಳ ವಿಜೃಂಭಣೆಯಿಂದ ನಡೆಯಿತು. ನನ್ನ ಅಧ್ಯಕ್ಷತೆಯಲ್ಲಿ ತೀರ್ಥಹಳ್ಳಿ, ಕೊಪ್ಪ, ಮಂಡಗದ್ದೆ, ಮೇಗರವಳ್ಳಿ ಮೊದಲಾದ ಕಡೆಗಳಿಂದ ಅಧಿಕ ಸಂಖ್ಯೆಯಲ್ಲಿ ಜನ ಸೇರಿದ್ದರು. ಮೈಸೂರಿನಿಂದ ಶ್ರೀಮಾನ್ ಕೃಷ್ಣಗಿರಿ ಕೃಷ್ಣರಾಯರನ್ನು ಆಮಂತ್ರಿಸಿದ್ದರು. ಅವರು ಅದ್ಭುತವಾಗಿ ಭಾರತ ವಾಚನ ಮಾಡಿದರು. ''ಆಗಲೇ ನಾನು 'ಹಾಡಿದನು ಗಮಕಿ, ನಾಡು ನಲಿದುದು ರಸದ ಕಡಲಿನಲಿ ಧುಮುಕಿ...' ಎಂದು ಪ್ರಾರಂಭವಾಗುವ ಅಸಮ ಪಂಕ್ತಿ ಛಂದಸ್ಸಿನ ಕವನ ರಚನೆ ಮಾಡಿದೆ''